first ಇರುವ ಹೆಸರನ್ನು ಕರೆದಿದ್ದೆ, ಹಾಗಾಗಿ ಸ್ವಲ್ಪ mistake ಆಗಿದೆ. ಅದರಿಂದ ಅವರಿಗೆ ಅವಕಾಶವನ್ನು ಕೊಡುತ್ತೇನೆ.

vii) ವಿಷಯ: ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಕೊಡಿಗೇಹಳ್ಳಿ ಗ್ರಾಮ ಸರ್ವೆ ನಂ:31ರಲ್ಲಿನ 4 ಎಕರೆ ಭೂಮಿಯನ್ನು ವಿಶೇಷ ಭೂಸ್ವಾಧೀನಾಧಿಕಾರಿ–2 ಇವರು ಭೂಸ್ವಾಧೀನ ಮಾಡಿ ಸಾರ್ವಜನಿಕ ಉದೇಶಕ್ಕೆ ಬಳಸದೇ ಇರುವ ಬಗ್ಗೆ.

ಶ್ರೀ ಈ. ತುಕಾರಾಂ (ಸಂಡೂರು):– ಮಾನ್ಯ ಅಧ್ಯಕ್ಷರೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ.31ರಲ್ಲಿರುವ 4 ಎಕರೆ ಭೂಮಿಯಲ್ಲಿ 75 ಜನರಿಗೆ ಕಂದಾಯ ನಿವೇಶನಗಳನ್ನು ಶುದ್ಧ ಕ್ರಯಕ್ಕೆ ನೋಂದಾಯಿಸಿ ಕೊಡಲಾಗಿದ್ದರೂ ಇದೇ ಸರ್ವೆ ನಂಬರ್ ಭೂಮಿಯನ್ನು ವಿಶೇಷ ಭೂಸ್ವಾಧಿನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿ.ಎಂ.ಐ.ಸಿ.ಪಿ) ಗಾಂಧಿನಗರ ಇವರು ಭೂಸ್ವಾಧೀನವನ್ನು ಮಾಡಿ ಯಾವುದೇ ಸಾರ್ವಜನಿಕರ ಉದ್ದೇಶಕ್ಕೆ ಬಳಸದೇ ಖಾಸಗಿ ವ್ಯಕ್ತಿ ಹಾಗೂ ಬಂಡವಾಳಶಾಹಿಗಳೊಂದಿಗೆ ಶಾಮೀಲಾಗಿ ಮಾರಾಟ ಮಾಡಿ ನಿರ್ಗತಿಕ ಬಡ ನಿವೇಶನದಾರರಿಗೆ ನಿವೇಶನವನ್ನು ಕೊಟ್ಟಿಲ್ಲ, ಇದರಿಂದ ಬಹಳ ಅನ್ಯಾಯವಾಗಿದೆ.

ಅಧ್ಯಕ್ಷರು:– ಇದು ಭಾಷಣವಲ್ಲ, ಚರ್ಚೆಯಲ್ಲ, ಇದು ಗಮನ ಸೆಳೆಯುವ ಸೂಚನೆ.

ಶ್ರೀ ಈ. ತುಕಾರಾಂ:– ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರ ಕೊಟ್ಟಿದೆ, ಆದರೆ ಇದು ಸಮಪರ್ಕವಾಗಿಲ್ಲ. ಇಲ್ಲಿ ನೋಂದಾಯಿಸಿರುವ ಎಲ್ಲಾ ರೆಕಾರ್ಡ್‌ಗಳಿವೆ.

ಅಧ್ಯಕ್ಷರು:– ಈ ವಿಷಯವನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಈ. ತುಕಾರಾಂ:– ಮಾನ್ಯ ಅಧ್ಯಕ್ಷರೆ, ಇವರಿಗೆಲ್ಲಾ ತುಂಬಾ ಅನ್ಯಾಯವಾಗಿದೆ, ದಯಮಾಡಿ ಇವರಿಗೆಲ್ಲರಿಗೂ ನ್ಯಾಯ ಒದಗಿಸಿಕೊಡಬೇಕು. ಈ ಬಗ್ಗೆ ಸರ್ಕಾರ ಉತ್ತರ ಕೊಡಬೇಕು.

ಅಧ್ಯಕ್ಷರು:– ಆಯಿತು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ,

ಮಾನ್ಯ ವಿಧಾನ ಸಭಾ ಸದಸ್ಯರುಗಳಾದ ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ ಮತ್ತು ಶ್ರೀ ಈ. ತುಕಾರಾಂ ಅವರುಗಳು ನಿಯಮ 73ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯ ಮಂತ್ರಿಯವರ ಹೇಳಿಕೆ

ಮಾನ್ಯ ಅಧ್ಯಕ್ಷರೆ ಯಶವಂತಪುರ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ: 31ರ ಪೈಕಿ 4–00 ಎಕರೆ ಜಮೀನನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 196 ಎಸ್‌ಪಿಕ್ಯೂ 1998, ದಿನಾಂಕ: 08.05.2003ರಂತೆ ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರಂತೆ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಸದರಿ 4–00 ಎಕರೆ ಜಮೀನನ್ನು ಕಂದಾಯ ದಾಖಲೆ ಪ್ರಕಾರ ಭೂಮಾಲೀಕರ ಹೆಸರನ್ನು ಅಧಿಸೂಚನೆಯಲ್ಲಿ ತಂದಿದ್ದು, ಐತೀರ್ಪು ರಚಿಸಿ, ಪರಿಹಾರ ಪಾವತಿಸುವ ಸಮಯದಲ್ಲಿ ಸದರಿ ಭೂ ಮಾಲೀಕರು ನಿವೇಶನಗಳನ್ನು ವಿಂಗಡಿಸಿ, ಮಾರಾಟ ಮಾಡಿರುವುದಾಗಿ, ಸದರಿ ನಿವೇಶನಗಳನ್ನು ಖರೀದಿಸಿರುವ ಖರೀದಿದಾರರು ತಮ್ಮ ಆಕ್ಷೇಪಣೆಗಳನ್ನು ಕಛೇರಿಗೆ ಸಲ್ಲಿಸಿದ್ದು, ಈ ಹಂತದಲ್ಲಿ ಪ್ರಕರಣದ ವಿಚಾರಣೆ ನಡೆಸಿ ನಿವೇಶನ ಖರೀದಿದಾರರು ನೀಡಿರುವ ಆಕ್ಷೇಪಣೆಗಳೊಂದಿಗೆ ಸದರಿ ದಾಖಲೆ ವಿವರವನ್ನು ನಮೂದಿಸಿ, ಅವಾರ್ಡ್ ಆದೇಶ ಮಾಡಿ ಸಿವಿಲ್ ನ್ಯಾಯಾಲಯದಲ್ಲಿ ಠೇವಣಿ ಇಡಲಾಗಿದೆ.